**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ದುರ್ಗಿ

ತಂದೆಯ ಹೆಸರು : ಹೊನ್ನಪ್ಪಾ ನಾಯ್ಕು

ವಯಸ್ಸು : 51 ವರ್ಷ

ಉದ್ಯೋಗ : ಜಿ ಎಲ್ ಪಿ ಎಸ್ ಬೆದರಿಕೇರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ

ವಾಸ್ತವ್ಯ : ಮಣ್ಕುಳಿ ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04/07/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 06.01.2021 ರಂದು ಸೋಮವಾರದದು ನಾವು ಶಾಲೆಗೆ ಬಂದಾಗ ಮರಗಳನ್ನು ಕಡಿದಿದ್ದು ಕಂಡುಬಂದಿರುತ್ತದೆ. ಸದರಿ ಮರಗಳನ್ನು ಯಾರು ಕಡಿದರು ಎಂದು ಶಾಲೆಯ ಮಕ್ಕಳನ್ನು ಕೇಳಿದಾಗ ಕೆಲವು ಮಕ್ಕಳು ತಮ್ಮ ತಂದೆ ತಮ್ಮ ತಂದೆ ಎಂದು ಮಕ್ಕಳು ಉತ್ತರಿಸಿರುತ್ತಾರೆ. ನಾವು ಈ ಬಗ್ಗೆ ಬಿ ಇ ಒ ಕಚೇರಿಗೆ ಮಾಹಿತಿ ನೀಡಿರುತ್ತೇವೆ. ಆರೋಪಿತಳು ಶಾಲೆಗೆ ಬಂದು ಚಾಸಾ 1 ರವರ ಹತ್ತಿರ ಜಗಳ ಮಾಡುತ್ತಿದ್ದಾಗ ಚಾಸಾ 1 ಇವರು ನೆಲಕ್ಕೆ ಬಿದ್ದಿರುತ್ತಾರೆ. ಮಕ್ಕಳ ಕೂಗಾಟ ಕೇಳಿ ನಾನು ಹಿಂತಿರುಗಿ ನೋಡಿದಾಗ ಚಾಸ 1 ಇವರು ನೆಲಕ್ಕೆ ಬಂದ್ದಿರುವುದನ್ನು ನೋಡಿರುತ್ತೇನೆ. ಆಗ ಆರೋಪಿತರು ಅಲ್ಲಿ ಇದ್ದರು. ನಂತರ ಚಾಸಾ 1 ಇವರನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿರುತ್ತೇವೆ. ಈ ಕುರಿತು ಚಾಸಾ 1 ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ಘಟನೆಯ ದಿನದಂದು ಶಾಲೆಯಲ್ಲಿ ಅಂದಾಜು 16 ಮಕ್ಕಳು ಇರಬಹುದು ನನಗೆ ಸರಿಯಾಗಿ ನೆನಪಿಲ್ಲ. ನಮ್ಮ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ 19 ಇರಬಹುದು. ಚಾಸಾ 1 ಇವರ ಮೇಲೆ ಹಲ್ಲೆ ಆದುದನ್ನು ನಾನು ನೋಡಿಲ್ಲ. ಸದರಿ ವಿಷಯವನ್ನು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಮರ ಕಡಿದ ಬಗ್ಗೆ ನಾವು ಬಿ ಇ ಒ ಅವರಿಗೆ ವಿಷಯ ತಿಳಿಸಿದ್ದು ಇರುತ್ತದೆ. ಹಲ್ಲೆ ಆದ ಘಟನೆಯನ್ನು ವಿದ್ಯಾರ್ಥಿಗಳು ನೋಡಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಚಾಸಾ 1 ಇವರಿಗೆ

ಹಲ್ಲೆಯಿಂದ ಕೈ ಉಬ್ಬಿದ್ದು ಇರುತ್ತದೆ. ಅವರ ಬಟ್ಟೆ ಕೊಳೆ ಆಗಿದ್ದು ಇರುವುದಿಲ್ಲ. ಸದರಿ ಘಟನೆಯಲ್ಲಿ ನನ್ನ ಮೇಲೆ ಯಾವುದೇ ಅಪರಾಧ ಆಗಿರುವುದಿಲ್ಲ. ದಿಃ 08.12.2021ರಂದು ನಾನು ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ವೈಧ್ಯರಲ್ಲಿ ಹಲ್ಲೆ ಆದ ಬಗ್ಗೆ ಹೇಳಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಅದೇ ದಿನ ಠಾಣೆಗೆ ಹೋಗಿರುತ್ತೇವೆ. ಚಾಸಾ 1 ಇವರು ಠಾಣೆಯಲ್ಲಿ ದೂರನ್ನು ಬರೆದು ನೀಡಿರುತ್ತಾರೆ. ನಾನು ಸದರಿ ಘಟನೆಗೆ ಸಂಬಂಧಿಸಿದಂತೆ ಹೇಳಿಕೆಯನ್ನು ಪೊಲೀಸರಿಗೆ ನೀಡಿದ್ದು ಇರುವುದಿಲ್ಲ. 1 ಮತ್ತು 2 ನೇ ಆರೋಪಿತರು ಇವರು ನಮ್ಮ ಶಾಲೆಯ ಪರಿಸರದ ಗೃಹಸ್ಥರು ಇರುತ್ತಾರೆ. 3 ನೇ ಆರೋಪಿ ಇವರು ಮುಟ್ಟಳ್ಳಿ ಗ್ರಾಮ ಪಂಚಾಯತಿಯ ಸದಸ್ಯರು ಆಗಿದ್ದಾರೆ. 4 ಮತ್ತು 5 ನೇ ಆರೋಪಿತರು ನಮ್ಮ ಶಾಲಾಭಿವೃದ್ಧಿ ಕಮೀಟಿಯ ಸದಸ್ಯರು ಆಗಿದ್ದಾರೆ.  1 ರಿಂದ 5 ನೇ ಆರೋಪಿತರು ಶಾಲೆಯ ಉಸ್ತುವಾರಿ ಆಗಿದ್ದಾರೆ ಎಂದರೆ ಸರಿಯಲ್ಲ. ಮುಟ್ಟಳ್ಳಿಯಲ್ಲಿ ಗ್ರಾಮ ಸಭೆ ನಡೆಯುತ್ತದೆ. ಆಗ ಗ್ರಾಮದ ವಿಷಯಗಳ ಚರ್ಚೆ ಆಗುತ್ತದೆ ಎಂದರೆ ಸರಿ. ನಾವು ಸರಿಯಾಗಿ ಶಾಲೆಗೆ ಹಾಜರಿರುತ್ತಿರಲಿಲ್ಲವೆಂದು ಊರಿನ ಜನರು ಹಾಗೂ ಆರೋಪಿತರು ಬಿ ಇ ಒ ಇವರಿಗೆ ದೂರನ್ನು ನೀಡಿದ್ದರು ಎಂದರೆ ಸರಿಯಾಗಿ ಆ ಕಾರಣಕ್ಕೆ ನಾವು ಸಿಟ್ಟಿನಿಂದ ಆರೋಪಿತರ ವಿರುದ್ದ ನಾನು ಹಾಗೂ ಚಾಸ 1 ಸೇರಿ ಸುಳ್ಳು ಪ್ರಕರಣ ಅವರ ವಿರುದ್ದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.  ನಾವು ಸಾಧಿಸುವ ಘಟನೆಯೇನಡೆದಿಲ್ಲ ಎಂದರೆ ಸರಿಯಲ್ಲ.  ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ, ಭಟ್ಕಳ.**